**ಕ್ರಿಯಾ ಸಂಶೋಧನೆ ಮತ್ತು ಚಿಂತನಶೀಲ ಆಚರಣೆಗಳು**

---

ಉಳಿದೆಲ್ಲ ವಿಷಯಗಳಂತೆಯೇ ಶಿಕ್ಷಣ ಶಾಸ್ತ್ರದಲ್ಲಿಯೂ ಜನಪ್ರಿಯ ಶಬ್ದಗಳಿರುತ್ತವೆ. 2013ರ ಆ ರೀತಿಯ ಆಕರ್ಷಕ ಪದವೆಂದರೆ 'ಕ್ರಿಯಾ ಸಂಶೋಧನೆ.' ಆಗಸ್ಟ್ ಮತ್ತು ಡಿಸೆಂಬರ್ 2013ರ ನಡುವೆ ಉತ್ತರಾಖಂಡದ ದಿನೇಶಪುರದ ಒಂದು ಶಾಲೆಯಲ್ಲಿ ಮುಖ್ಯ ಶಿಕ್ಷಕರೂ ಸೇರಿದಂತೆ ಒಂಬತ್ತು ಶಿಕ್ಷಕರು ನಡೆಸಿದ ಕೆಲಸಗಳ ಕ್ರಿಯಾ ಸಂಶೋಧನೆಗಳ ವಿವರಣೆಯ ವಿಡಿಯೋಗಳನ್ನು ನಾವು ನೋಡಿದೆವು. ಈ ಕ್ರಿಯಾ ಸಂಶೋಧನೆಗಳು ತರಗತಿಯಲ್ಲಿ ಎದುರಿಸಿದ ಸವಾಲುಗಳ ಬಗ್ಗೆಯೇ ಇದ್ದವು. ಇಡೀ ಪ್ರಕ್ರಿಯೆಯಲ್ಲಿ ಅಜೀಂ ಪ್ರೇಮ್‌ಜೀ ಪ್ರತಿಷ್ಠಾನದ ಕೆಲವು ಸದಸ್ಯರು ಶಿಕ್ಷಕರಿಗೆ ನೆರವಾದರು. ಈ ಅಧ್ಯಯನದ ನೇತೃತ್ವವನ್ನು ಡಾ॥ ನೀರಜ ರಾಘವನ್ ಅವರು ವಹಿಸಿದ್ದರು. ಅವರು 'ದ ರಿಫ್ಲೆಕ್ಟಿವ್ ಟೀಚರ್' (ಚಿಂತನಶೀಲ ಶಿಕ್ಷಕ) ಎಂಬ ಪುಸ್ತಕದಲ್ಲಿ ತಮ್ಮೆಲ್ಲ ಅಧ್ಯಯನವನ್ನು ಕಲೆ ಹಾಕಿದ್ದಾರೆ. ಈ ಪುಸ್ತಕದಲ್ಲಿ ಉಪಯೋಗಿಸಿದ ಎಲ್ಲ ದಾಖಲೆಗಳೂ 'ವೃತ್ತಿನಿರತ ಶಿಕ್ಷಕನೊಳಗಿನಿಂದ ಒಡಮೂಡಿದ ಚಿಂತನಶೀಲ ಶಿಕ್ಷಕ' ಎಂಬ ವಿಡಿಯೋ ದಾಖಲೆಯಿಂದ ಆಯ್ದದ್ದು.

---

ಚಿಂತನೆಯನ್ನು ಉದ್ದೀಪಿಸುವ ಅದ್ಭುತವಾದ ಶೀರ್ಷಿಕೆ! 'ಸೇವಾನಿರತ ಶಿಕ್ಷಕರೊಳಗಿನಿಂದ ಹೊರಚಿಮ್ಮುವ ಚಿಂತನಶೀಲ ವೃತ್ತಿಗಾರ'. ಈ ಶೀರ್ಷಿಕೆಯೇ ಪ್ರತಿಯೋರ್ವ ಶಿಕ್ಷಕರಲ್ಲೂ ಒಳಗೆ ಹುದುಗಿರುವ ಅಧೀಮ ಶಕ್ತಿಯನ್ನು ಪ್ರತಿನಿಧಿಸುತ್ತದೆ. ಒಂದು ಪೊರೆ ಹುಳುವಿನಂತೆ ಮನಸ್ಸಿಗೆ ಭಾಸವಾಗುತ್ತದೆ. ಈ ಅಧ್ಯಯನದಲ್ಲಿ ತೊಡಗಿಸಿಕೊಂಡ ಶಿಕ್ಷಕರ ಕೆಲಸಗಳ ಕಿರುಚಿತ್ರಗಳು ಇದೇ ಕಾರಣಕ್ಕಾಗಿಯೇ ಪ್ರಭಾವ ಬೀರುತ್ತವೆ. ಮೂಲ ವಿಷಯಗಳ ತಿಳಿವಿಲ್ಲದ ವಿದ್ಯಾರ್ಥಿಗಳು, ಪ್ರಾಥಮಿಕ ಹಂತದ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನ ಇಲ್ಲದ ವಿದ್ಯಾರ್ಥಿಗಳು, ಮೊದಲ ತಲೆಮಾರಿನ ಕಲಿಗರು, ಶಾಲೆಗೆ ನಿಯಮಿತವಾಗಿ ಬರದಿರುವುದು ಮತ್ತು ಮನೆಯ ಪರಿಸರದಲ್ಲಿ ಕಲಿಕೆಗೆ ಬೆಂಬಲ ದೊರೆಯದಿರುವುದು - ಹೀಗೆ ಕೊನೆಯಿಲ್ಲದ ಸವಾಲುಗಳ ಪಟ್ಟಿ. ದೇಶದ ಉದ್ದಗಲದ ಶಿಕ್ಷಕರು ಎದುರಿಸುವ ಈ ಸವಾಲುಗಳನ್ನೇ ಎದುರಿಸುತ್ತಿರುವ ಶಿಕ್ಷಕರೇ ಈ ಚಿತ್ರಗಳಲ್ಲಿ ಕಂಡರು. ಪಠ್ಯವನ್ನು ಸಮಯದೊಳಗೇ ಮುಗಿಸುವುದು, ಕಲಿಕೆಯ ವಿವಿಧ ಸಾಮರ್ಥ್ಯದ ಮಕ್ಕಳು, ಬೇರೆ ಬೇರೆ ಭಾಷೆಗಳನ್ನಾಡುವ ಮಕ್ಕಳು ಇಂತಹವೂ ಈ ಸವಾಲುಗಳೊಡನೆ ಸೇರುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಏನು ತಾನೇ ಸಾಧ್ಯವಾದೀತು?

ವಿಸ್ಮಯವೆಂದರೆ, ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು, ಅದಕ್ಕೆ ವಿನೂತನವೆನಿಸಿದರೂ ಸರಳವಾದ ಉತ್ತರಗಳನ್ನು ಹುಡುಕುವ ಶಿಕ್ಷಕರು ನಮಗೆ ಕಂಡರು. ಇದೇನೂ ಬಹಳ ಅಪರೂಪವಲ್ಲ. ಜಗತ್ತಿನೆಲ್ಲೆಡೆ ಶಿಕ್ಷಕರು ಇದನ್ನೇ ಮಾಡುವುದು, ವಿಡಿಯೋದಲ್ಲಿ ಒಬ್ಬ ಶಿಕ್ಷಕರು ಹೇಳಿದಂತೆ ಇದಕ್ಕೇನೂ 'ಕ್ರಿಯಾ ಸಂಶೋಧನೆ'ಎಂಬಂತಹ ಹೊಸ ಹೆಸರೂ ನೀಡಬೇಕಿಲ್ಲ. ಏಕೆಂದರೆ, ಅದು ಅವರ ಕೆಲಸದ ಭಾಗ. ಇಲ್ಲಿ ವ್ಯತ್ಯಾಸವೆಂದರೆ, ಈ ಯೋಜನೆಯಲ್ಲಿ ಶಿಕ್ಷಕರು ಅನುಸರಿಸಿದ ಹಂತಗಳ ಚಕ್ರ.



[redacted]

ಇಡೀ ಪ್ರಕ್ರಿಯೆಯಲ್ಲಿ ಅನಿವಾರ್ಯವಾಗಿದ್ದ ದಾಖಲೆಗಳನ್ನು ಬರೆಯುವ ಕೆಲಸವನ್ನು ಶಿಕ್ಷಕರೆಲ್ಲರೂ ದ್ವೇಷಿಸುತ್ತಿದ್ದರೂ ತಾವು ಬಳಸುತ್ತಿರುವ ತಂತ್ರಗಳ ಬಗ್ಗೆ ಮಂಥನ ನಡೆಸಲು ಅವರಿಗೆ ಇದೊಂದು ದಾರಿ ಎಂಬುದನ್ನೂ ಒಪ್ಪಿದ್ದರು. ಕೆಲವರಿಗೆ ಸರಿಯಾಗಿ ದಾಖಲೆ ಇಡುವುದಕ್ಕೆ ಒಂದು ಮಾನದಂಡ ಬೇಕಿತ್ತು. ಕೊನೆಯಲ್ಲಿ ಎಲ್ಲರ ಅರಿವಿಗೂ ಬಂದದ್ದೆಂದರೆ ದಾಖಲೆ ಬರೆಯುವುದಕ್ಕಿಂತಲೂ ಮುಖ್ಯವಾದ ವಿಷಯವೆಂದರೆ ಮಂಥನ ನಡೆಸುವದು.

ಶಿಕ್ಷಕರು ನಡೆಸಿದ ಕ್ರಿಯಾಯೋಜನೆಯ ವಿವರಗಳು ಮುಂದಿನ ಭಾಗದಲ್ಲಿ:

ಎ) ಇಂಗ್ಲೀಷ್ ಪದಸಂಪತ್ತು ಮತ್ತು ಓದುವ ಸಾಮರ್ಥ್ಯ ಹೆಚ್ಚಿಸುವುದು - ಶಿಪ್ರಾ ಅಗರ್ವಾಲ್

ಶಾಲೆಯಲ್ಲಿ ಮಕ್ಕಳಿಗೆ ಪಾಠ ಹೇಳಿದ ಹದಿನೇಳು ವರ್ಷಗಳಲ್ಲಿ ಶಿಪ್ರಾ ಅಗರ್ವಾಲ್ ಕೂಡ ಉಳಿದ ಶಿಕ್ಷಕರಂತೆ ಪಠ್ಯ ಪುಸ್ತಕವನ್ನು ತನ್ನ ತರಗತಿಯ ಪ್ರಕ್ರಿಯೆಗೆ ಮೂಲ ಆಧಾರವನ್ನಾಗಿ ಹೊಂದಿದ್ದರು. ಒಂದು ಸಮಯದಲ್ಲಿ ಆಕೆಗೆ ತನ್ನ ವಿದ್ಯಾರ್ಥಿಗಳು ತಾನು ಪಾಠ ಮಾಡುವ ವಿಷಯದಲ್ಲಿ ಉತ್ತಮ ಪರಿಣತಿ ಹೊಂದುವಂತೆ ಮಾಡಬೇಕೆಂಬ ತುಡಿತ ಉಂಟಾಯಿತು. ತಾನು ಕಲಿಸುವ ಮಕ್ಕಳು ವಿಷಯವನ್ನು ಕಲಿಯಬೇಕು ಮತ್ತು ವಿಷಯವನ್ನು ಕಲಿಯುವುದನ್ನೂ ಕಲಿಯ ಬೇಕೆಂದೆನಿಸಲಾರಂಭಿಸಿತು. ಈ ಕ್ರಿಯಾ ಸಂಶೋಧನೆಯ ಅನುಸಾರ 4ನೇ ತರಗತಿಯ ಮಕ್ಕಳ ಇಂಗ್ಲೀಷ್ ಪದಸಂಪತ್ತು ಹೆಚ್ಚಿ ಅವರು ಹೆಚ್ಚಿನ ಪದಗಳನ್ನು ಗುರುತಿಸಿ ಅರ್ಥ ಮಾಡಿಕೊಳ್ಳುವ ಹಾಗೆ ಆಗಬೇಕು ಎಂದು ಆಕೆ ನಿರ್ಧರಿಸಿದರು. ಒಂದೆರಡು ಪಾಠಗಳನ್ನು ಮಾಡಿದ ನಂತರ ಆಕೆ ನಡೆಸಿದ ಮಾಪನದಿಂದ ಮಕ್ಕಳು ಇಂಗ್ಲೀಷ್ ಮಾತನಾಡಲು, ಓದಲು ಮತ್ತು ಬರೆಯಲು ಕಷ್ಟ ಪಡುತ್ತಾರೆಂದು ತಿಳಿಯಿತು. ಮುಖ್ಯವಾಗಿ ಓದುವುದು ಮತ್ತು ಆ ಮೂಲಕ ಮಕ್ಕಳಿಗೆ ಆತ್ಮಸ್ಥೈರ್ಯ ತುಂಬುವುದರ ಮೇಲೆಯೇ ಆಕೆ ಗಮನಹರಿಸಿದರು. ವಿನೂತನ ತಂತ್ರಗಳಾದ ದೃಶ್ಯ, ಸುಳಿವುಗಳು, ಓರಿಗೆಯವರಿಂದ ಬೆಂಬಲ ಮತ್ತು ಭಾಷಾಧಾರಿತ ಆಟಗಳು ಇವನ್ನು ಉಪಯೋಗಿಸಿದರು. ನಿಧಾನವಾಗಿ ಒಂದೊಂದೇ ಆಧಾರಗಳನ್ನು ಕಡಿಮೆ ಮಾಡುತ್ತಾ ಮಕ್ಕಳು ಧೈರ್ಯದಿಂದ ಸ್ವಂತವಾಗಿ ಓದುವುದನ್ನು ರೂಢಿಸಿಕೊಳ್ಳುವಂತೆ ಮಾಡಿದ್ದಾರೆ. ಒಂದು ತಿಂಗಳ ಈ ಪ್ರಯತ್ನದ ನಂತರ ಮಕ್ಕಳು ಸುಮಾರು 6 ಪಟ್ಟು ಹೆಚ್ಚು ಪದಗಳನ್ನು ಓದಲು ಸಾಧ್ಯವಾಯಿತು.

ಕ್ರಿಯಾ ಸಂಶೋಧನೆಯ ಸೂಕ್ಷ್ಮತೆಗಳಿಂದಾಗಿ ಶಿಪ್ರಾಳ ಗಮನಿಸುವ ಕೌಶಲ ತೀಕ್ಷ್ಣವಾಗಿರುವುದನ್ನು ಈ ವೀಡಿಯೋಗಳನ್ನು ನೋಡಿದಾಗ ನನ್ನ ಗಮನ ಸೆಳೆಯಿತು. ವಿಷಯದ ತಿಳಿವು ಮತ್ತು ಕೌಶಲ ಎರಡರಲ್ಲೂ ಮಕ್ಕಳು ಅಗತ್ಯ ಮಟ್ಟದಲ್ಲಿಲ್ಲ ಎಂಬುದನ್ನು ಆಕೆ ಗುರುತಿಸಿದರು. ಆಕೆ ಮಾಡಲು ಸುಲಭಸಾಧ್ಯವಾದ ಯುಕ್ತಿಗಳನ್ನೇ ಬಳಸಿದರು. ಅಷ್ಟೇ ಅಲ್ಲದೇ ಅವು ಸಮಸ್ಯೆಯ ಮೂಲವನ್ನು ಗುರುತಿಸಿತು. ಎಲ್ಲ ಶಿಕ್ಷಕರು ಕೂಡ ಇದರಿಂದ ಸ್ಫೂರ್ತಿ ಪಡೆಯಲೇಬೇಕು. ಆಕೆಯ ಕೆಲಸ ಹೆಚ್ಚಿದರೂ ಕೂಡ ತರಗತಿಯಲ್ಲಿ ವಿವಿಧ ಕಲಿಕಾ ಹಂತದಲ್ಲಿರುವ ಮಕ್ಕಳಿಗೆ ತಕ್ಕ ಸೂಚನೆಗಳ ಮೂಲಕ ಕಲಿಸಲು ಸಾಧ್ಯವಾದದ್ದು ಆಕೆಗೆ ತೃಪ್ತಿ ನೀಡಿದೆ. ಆಕೆ ಈ ಪ್ರಕ್ರಿಯೆಯಲ್ಲಿ ಆದ ಕಲಿಕೆಯನ್ನು ಪ್ರಾಯೋಗಿಕ ನೆಲೆಯಲ್ಲಿ ದಾಖಲೆ ಮಾಡಲೂ ಕೂಡ ಸಾಧ್ಯವಾಯಿತು. ಅದೂ ಕೆಲಸದ ಹೊರೆ ಹೆಚ್ಚದಂತೆಯೇ.

ಬಿ) ಪ್ರತಿಯೊಂದು ಮಗುವೂ ಗಮನಿಸುತ್ತದೆ ಮೋಹಿತ್ ಶರ್ಮ

ಪರಿಸರ ವಿಜ್ಞಾನವನ್ನು ಕಲಿಸುವ ಮೋಹಿತ್ ಶರ್ಮ ಅವರಿಗೆ ಮಕ್ಕಳಿಗೆ ಹಿಂದಿಯನ್ನು ಓದಲು ಮತ್ತು ಬರೆಯಲು ಬರುವುದಿಲ್ಲ ಎಂದು ತಿಳಿಯಿತು. ಆ ಮಕ್ಕಳಿಗೆ ಧೈರ್ಯ ತುಂಬಿ ಆಸಕ್ತಿಯಿಂದ ಪರಿಸರ ವಿಜ್ಞಾನ ಕಲಿಯುವಂತೆ ಪ್ರೇರೇಪಿಸುವಂತೆ ಮಾಡಲು ಅವರು ಬಯಸಿದರು. ಮಕ್ಕಳು ಸುತ್ತು ಮುತ್ತಲಿನದನ್ನು ಗಮನಿಸಿ, ಅವರ ಗ್ರಹಿಕೆಗೆ ಬಂದದ್ದನ್ನು ಚಿತ್ರಗಳ ಮೂಲಕ/ಛಾಯಾ ಚಿತ್ತಗಳ ಮೂಲಕ ನಿರೂಪಿಸುವಂತೆ ಮಾಡಿದರು. ಮಕ್ಕಳು ಪ್ರಾಣಿಗಳ ಚಿತ್ರಗಳನ್ನು ಬರೆದು ಅವು ವಾಸಿಸುವ ನೆಲೆಯೊಂದಿಗೆ ಹೊಂದಿಸುವಂತಹ ಒಂದು ಚಟುವಟಿಕೆಯನ್ನು ಮಾಡಿಸಿದರು. ಎಲ್ಲ ಮಕ್ಕಳಿಗೂ ಈ ಚಟುವಟಿಕೆಯನ್ನು ಮಾಡಿಸಿದರೂ 5 ಮಕ್ಕಳ ಕೆಲಸ ಮತ್ತು ಕಲಿಕೆಯನ್ನು ದಾಖಲಿಸಿದರು.

ಉಳಿದ ಮಕ್ಕಳಂತೆಯೇ ಇವರೂ ಕಲಿಯುತ್ತಿದ್ದರೂ ಉತ್ತರ ಬರೆಯಲು ಕಷ್ಟ ಪಡುತ್ತಿದ್ದರು. ಚಿತ್ರಗಳು ಮತ್ತು ರೂಪಗಳು ಈ ಮಕ್ಕಳಿಗೆ ಉತ್ತಮ ಫಲ ನೀಡಿದವು. ಮಕ್ಕಳು ತರಗತಿಯಲ್ಲಿ ಪಾಲ್ಗೊಳ್ಳಲು ಮತ್ತು ಮಾತನಾಡಲೂ ಆರಂಭಿಸಿದರು. ಇವರು ಉತ್ತಮ ಗಮನಿಸುವಿಕೆ ಉಳ್ಳವರೂ ಆಗಿದ್ದರು. ಮೀನುಗಳ ಉಸಿರಾಟದ ಚಟುವಟಿಕೆಯಲ್ಲಿ ಈ 5 ಮಕ್ಕಳಲ್ಲಿ ಒಂದು ಮಗು ತುಂಬ ಮುಖ್ಯವಾದದ್ದನ್ನು ಗಮನಿಸಿ ತರಗತಿಯಲ್ಲಿ ಅದನ್ನು ಹಂಚಿಕೊಂಡಿತು.

ಮಕ್ಕಳಿಗೆ ಓದಲು ಬರೆಯಲು ಮಾತ್ರ ಕಲಿಸುವುದರಿಂದಲಾಗಲೀ ಅಥವಾ ಕೇವಲ ಬರೆಯುವುದರಿಂದಾಗಲೀ ಅವರು ಕಲಿತದ್ದನ್ನು ಅಳೆಯುವುದರಿಂದರಾಗಲೀ ಮಕ್ಕಳ ಕಲಿಕೆಯ ಮಟ್ಟ ತಿಳಿಯುವುದಿಲ್ಲ. ತಮ್ಮಕಲಿಕೆಯನ್ನು ವ್ಯಕ್ತ ಪಡಿಸಲು ಬೇರೆ ಬೇರೆ ಅವಕಾಶಗಳು ಮಕ್ಕಳಿಗೆ ಸಿಗುವಂತಾಗಬೇಕು. ಮಕ್ಕಳೊಡನೆ ಪರಸ್ಪರ ನಂಬಿಕೆಯ ಸಂಬಂಧವನ್ನು ಮಕ್ಕಳೊಡನೆ ಬೆಳೆಸಲೂ ಸಾಧ್ಯವಾದದ್ದರಿಂದ ಮಕ್ಕಳಲ್ಲಿ ಆತ್ಮ ವಿಶ್ವಾಸವೂ ಬೆಳೆಯಿತು. ಮಕ್ಕಳನ್ನು ಬೇರೆ ಮಾಡದೇ ಅದೇ ತರಗತಿಯಲ್ಲಿಯೇ ಅವರನ್ನು ಪಾಲ್ಗೊಳ್ಳುವಂತೆ ಮಾಡಿರುವುದೂ ಮೋಹಿತ್ ಅವರು ಮಕ್ಕಳ

ಬಗೆಗಿನ ಗ್ರಹಿಕೆಯನ್ನು ತೋರಿಸುತ್ತದೆ. ಮಕ್ಕಳ ಕಲಿಕೆಯ ಮಾಪನದ ರೀತಿಯ ಬಗ್ಗೆಯೂ ಕೂಡ ಮೋಹಿತ್ ಅವರು ಮಂಥನ ನಡೆಸಲು ಸಾಧ್ಯವಾಯಿತು.

ಸಿ) 3 ಅಂಕೆಯ ಸಂಖ್ಯೆಗಳ ಸ್ಥಾನ ಬೆಲೆ ತಿಳಿಯುವಂತೆ ಮಾಡುವುದು - ಶಕುಂತಲಾ ಚೌರಾಸಿಯಾ ಮತ್ತು ಸೌದ್‌ಅಹ್ಮದ್‌ಖಾನ್

ಓರ್ವ ಗಣಿತ ಶಿಕ್ಷಕರ ಪಡಿಪಾಟಲು ಮತ್ತು ಶಿಕ್ಷಕರಿಗೆ ಎಷ್ಟು ಕೆಲಸಗಳು ತುಂಬಿಕೊಂಡಿವೆ ಎಂಬುದರ ಒಂದು ನೈಜ ಚಿತ್ರಣ ಇಲ್ಲಿದೆ. ಶಕುಂತಲಾ ಚೌರಾಸಿಯಾ ಮತ್ತು ಸೌದ್ ಅಹ್ಮದ್ ಖಾನ್ ಅವರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯ ಎಲ್ಲ ಶಿಕ್ಷಕರು ಸಾಮಾನ್ಯವಾಗಿ ಎದುರಿಸುವ ಸಮಸ್ಯೆಗೆ ಉತ್ತರ ಕಂಡುಕೊಳ್ಳುವ ಪ್ರಯತ್ನದ ಈ ಯೋಜನೆಯನ್ನು ಒಟ್ಟಾಗಿ ಮಾಡಲು ನಿರ್ಧರಿಸಿದರು. ವಿಯಷಗಳ ಮೂಲ ಗ್ರಹಿಕೆಯೇ ಇಲ್ಲದಿದ್ದರೆ 6ನೇ ತರಗತಿಯಲ್ಲಿ ಅಷ್ಟು ವಿಷಯಗಳನ್ನು ತರಗತಿಯಲ್ಲಿ ಪಾಠ ಮಾಡುವುದಾದರೂ ಹೇಗೆ? ಈ ಪ್ರಸಂಗದಲ್ಲಿ 6ನೇ ತರಗತಿಯ ಮಕ್ಕಳು ಸಂಖ್ಯೆಗಳಲ್ಲಿನ ಸ್ಥಾನ ಬೆಲೆಯ ವಿಷಯದಲ್ಲಿ ಕಷ್ಟಪಡುತ್ತಿದ್ದರು. ಪರೀಕ್ಷೆಯೆಂಬ ಒತ್ತಡವಿಲ್ಲದ ಹಾಗೆ, ಕೇವಲ ತರಗತಿಯಲ್ಲಿ ಕಪ್ಪು ಹಲಗೆಯ ಮೇಲೆ ಸರಳ ಸಮಸ್ಯೆಗಳನ್ನು ಬಿಡಿಸುವಚಟುವಟಿಕೆಯ ಮೂಲಕ 9 ವಿದ್ಯಾರ್ಥಿಗಳು ಹೊಂದಿಸುವುದರಲ್ಲಿ, ಹೋಲಿಸುವುದರಲ್ಲೂ ಮತ್ತು 2 -3 ಅಂಕೆಯ ಸಂಖ್ಯೆಗಳನ್ನು ಬರೆಯುವುದರಲ್ಲಿ ಪ್ರಯಾಸಪಡುವುದನ್ನು ಗುರುತಿಸಿದರು. ತರಗತಿಯಲ್ಲಿ ಮಕ್ಕಳೇ ಮಾಡಬಹುದಾದ ಸರಳ ಸಾಮಗ್ರಿಗಳನ್ನು ಬಳಸಲು ನಿರ್ಧರಿಸಿ, ವಿವಿಧ ಸ್ಥಾನ (ಬಿಡಿ, ಹತ್ತು, ನೂರು) ಸಂಖ್ಯೆಗಳಿರುವ ಬಣ್ಣ ಬಣ್ಣದ ಆಕೃತಿಗಳು ಮುಂತಾದುವನ್ನು ರಚಿಸಿದರು. ಸರಳವಾದ ಮೂಲ ವಿಷಯಗಳಿಂದ ತೊಡಗಿ ಒಂದೊಂದಾಗಿ ಮಕ್ಕಳಿಗೆ ಸಾಂಖ್ಯಿಕ ಜ್ಞಾನವನ್ನು ಹೆಚ್ಚಿಸುವಲ್ಲಿ ಯಶಸ್ವಿಯಾದರು. ಈ ವಿಡಿಯೋಗಳು ನನಗೆ ಬಹಳವೇ ಹಿಡಿಸಿದವು. ಮಕ್ಕಳ ಕಲಿಕೆಯ ಸ್ಥಿತಿಗೆ ಎದುರಾಗುವಲ್ಲಿನ ನಿಜಾಯಿತಿ, ಪರಿಹಾರ ಶಿಕ್ಷಣದ ತಂತ್ರಗಳನ್ನು ಮುಂಚೆಯೂ ಬಳಸಲಾಗಿದೆ ಮತ್ತು ಈ ಯೋಜನೆಯ ನಂತರವೂ ಬಳಸುವುದನ್ನು ಮುಂದುವರಿಸಲಾಗುವುದು ಎಂಬ ಭಾವನೆ, ಯೋಜನೆಯ ದಾಖಲಾತಿ ಕೆಲಸ ಸಮಯ ಹಿಡಿಯುವಂತಹುದು ಮತ್ತು ಶಿಕ್ಷಕರ ವೈಯಕ್ತಿಕ ಸಮಯವನ್ನು ಬೇಡುತ್ತದೆ - ಹೀಗೆ ಹಲವಾರು ವಿಷಯಗಳನ್ನು ಮುಕ್ತವಾಗಿ ಹೇಳಿದ್ದಾರೆ. ಈ ಎಲ್ಲ ಸವಾಲುಗಳನ್ನೂ ಮೀರಿ ಶಿಕ್ಷಕರು ಹೊಸ ವಿಷಯಗಳನ್ನು ಕಂಡುಕೊಂಡರು: ಮಕ್ಕಳು ತಾವು ತಯಾರಿಸಿದ ಕಲಿಕಾ ಸಾಮಗ್ರಿಗಳೆಡೆಗೆ ಮಮಕಾರ ಬೆಳೆಸಿಕೊಳ್ಳುತ್ತಾರೆ; ಮನೆಗೆಲಸವೆಂದರೆ ಬೆದರುತ್ತಿದ್ದ ಮಕ್ಕಳು ಮನೆಗೆಲಸಕ್ಕೆ ಹಾತೊರೆಯುತ್ತಾರೆ; ಮಕ್ಕಳೇ ಸಮಸ್ಯೆಗಳನ್ನು ರಚಿಸುವ ತಂತ್ರವನ್ನು ಹೆಣೆದಿದ್ದು; ಬೇರೆ ಬೇರೆ ರೀತಿಯ ಪಾಠಮಾಡುವ ಒತ್ತಡ ಕಡಿಮೆ ಮಾಡಿದ ಇಬ್ಬರು ಶಿಕ್ಷಕರಿರುವುದು; ಹೀಗೆ. ಈ ಎಲ್ಲವೂ ಇವರಿಗೆ ಮಕ್ಕಳಲ್ಲಿ ತಿಳಿವು ಮೂಡಿಸುವ ರಮ್ಯ ಪಯಣಕ್ಕೆ ಪ್ರಯತ್ನ ಪಡುವಂತೆ ಪ್ರೇರೇಪಿಸಿದವು; ಕೇವಲ ವಿಷಯ ಮುಟ್ಟಿಸುವ ಶುಷ್ಕ ರೀತಿಯಲ್ಲ.

ಡಿ) ಮಕ್ಕಳು ತಾವು ಮಾಡಿಯೇ ಕಲಿಯುವುದು: ನೀರಜ್

ನೀರಜ್ 5 ಮತ್ತು 6ನೇ ತರಗತಿಯ ಮಕ್ಕಳಿಗೆ ವಿಜ್ಞಾನದ ಪಾಠ ಮಾಡುತ್ತಾರೆ. ಮಕ್ಕಳು ಸಾಮಾನ್ಯವಾಗಿ ಪ್ರಶ್ನೆಗಳನ್ನು ಕೇಳುವುದಿಲ್ಲ ಮತ್ತು ಶಿಕ್ಷಕರು ಹೇಳಿದ್ದನ್ನೆಲ್ಲಾ ನಂಬುತ್ತಾರೆ. ಹಾಗಾಗಿ ಮಕ್ಕಳಿಗೆ ವಿಜ್ಞಾನ ಅರಿಯುವ ವಿಧಾನವನ್ನು ಹೇಳಿಕೊಡಬೇಕು ಮತ್ತು ಅವರಲ್ಲಿ ಪ್ರಶ್ನೆಗಳು ಹುಟ್ಟುವ ಹಾಗೆ ಮಾಡಬೇಕು ಎಂದು ಅವರಿಗೆ ಅನ್ನಿಸಿತು. ಮೊದಲ ಹೆಜ್ಜೆಯಾಗಿ ಮಕ್ಕಳೊಂದಿಗೆ ಚರ್ಚೆ ಆರಂಭಿಸಿ ಅವರು ಪ್ರಶ್ನೆಗಳನ್ನು ಕೇಳಲು ಸಹಾಯ ಮಾಡಿದರು. ಮೊಳಕೆಯೊಡೆಯುವಲ್ಲಿ ಪ್ರಮುಖವಾದ ಅಂಶಗಳನ್ನು ಗಮನಿಸುವುದು ಮತ್ತು ಗಿಡಗಳು ಬೇರಿನಿಂದ ನೀರನ್ನು ಹೀರುವುದು ಇಂತಹ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಿಕೊಂಡರು. ಮಕ್ಕಳೇ ಪ್ರಯೋಗವನ್ನು ಜೋಡಿಸಿದರು, ಗಮನಿಸಿದರು, ಗಮನಿಸಿದ್ದನ್ನು ಬರೆದುಕೊಂಡರು. ಸಾಕಷ್ಟು ಪ್ರಶ್ನೆಗಳನ್ನು ಕೇಳಿದರು ಮತ್ತು ಸೂರ್ಯನ ಬೆಳಕು, ನೀರು, ಮತ್ತು ಮಣ್ಣಿನ ಬದಲಾವಣೆಯ ಮೂಲಕ ವಾತಾವರಣದ ಬದಲಾವಣೆ ಮಾಡಿ ನೋಡಿದರು. ಈ ಪ್ರಕ್ರಿಯೆಯ ಮೂಲಕ ಮಕ್ಕಳು ಪ್ರಶ್ನಿಸುವುದು ಮತ್ತು ಉತ್ತರಗಳನ್ನು ಹುಡುಕುವುದನ್ನೂ ಕಂಡುಕೊಂಡಿದ್ದಾರೆ. ಮುಂಚೆ ನೀರಜ್ ಅವರು ವಿಷಯವನ್ನು ತಿಳಿಸಿ ನಂತರ ಚಟುವಟಿಕೆ ಮಾಡಿಸುತ್ತಿದ್ದರು. ಈಗ ಮಕ್ಕಳು ಚಟುವಟಿಕೆಯ ಮೂಲಕ ಅನ್ವೇಷಣೆ ಮಾಡಿ ವೈಜ್ಞಾನಿಕ ನಿಯಮಗಳನ್ನು ಅರಿಯುವ ಪ್ರಯತ್ನ ಮಾಡುತ್ತಿದ್ದಾರೆ. ಈಗ ನೇರವಾಗಿ ಉತ್ತರಗಳನ್ನು ಹೇಳುವುದನ್ನು ಬಿಟ್ಟಿದ್ದಾರೆ. ಈ ಪ್ರಕ್ರಿಯೆಯು ಮಕ್ಕಳು ತಾವೇ ಮಾಡಿ ಕಲಿಯುವ ವಿಷಯದ ಅರಿವು ಬೆಳೆದು ಚಿಂತನೆಗೆ ಹಚ್ಚಿದೆ. ಈ ಕ್ರಿಯಾ ಸಂಶೋಧನೆಯನ್ನು ಮಾಡುತ್ತಾ ಆತ ಬಹಳವೇ ಕಲಿತಿದ್ದಾರೆ ಮತ್ತು ವಿವಿಧ ವೈಜ್ಞಾನಿಕ ವಿಷಯಗಳ ಬಗ್ಗೆ ಚಿಂತಿಸಲಾರಂಭಿಸಿದ್ದಾರೆ.

ಇ) ಹಿಂದಿ ಅಕ್ಷರ ಮತ್ತು ಪದಗಳನ್ನು ಓದುವುದು, ಬರೆಯುವುದರಲ್ಲಿ ಪ್ರಾವೀಣ್ಯತೆ ಹೆಚ್ಚಿಸುವುದು: ನರೇಂದ್ರ ಜೋಷಿ ಮತ್ತು ಸಹಾಬುದ್ದಿನ್ ಅನ್ಸಾರಿ

ಪಾಲ್ ಲಾಕ್ಹಾರ್ಟ್ ಅವರು ತಮ್ಮ ಪ್ರಸಿದ್ಧ ಪುಸ್ತಕ 'ಲಾಕ್ಹಾರ್ಟನ ಲ್ಯಾಮೆಂಟ್'ನಲ್ಲಿ ಗಣಿತ ಕಲಿಸುವುದರ ಬಗ್ಗೆ "ನಾನಿಲ್ಲಿ ಶಾಲೆಗಳಲ್ಲಿನ ಗಣಿತದ ವಿಮರ್ಶೆಯ ಕೊರತೆಯ ಬಗ್ಗೆ ಹೇಳಲು ಸಾಧ್ಯವೇ ಆಗಿಲ್ಲ. ಸಾಹಿತ್ಯದಂತೆಯೇ ಗಣಿತವೂ ಕೂಡ ಮನುಷ್ಯ ತನ್ನ ಆನಂದಕ್ಕೆ ರಚಿಸಿದಂತಹುದು ಮತ್ತು ಗಣಿತದ ರಚನೆಗಳೂ ವಿಮರ್ಶೆಗೆ ತೆರೆದು ಕೊಂಡಿರುವಂತಹುದೂ ಹಾಗೂ ಗಣಿತದ ಅಭಿರುಚಿಯನ್ನು ಹೊಂದುವದೂ ಮತ್ತು ಬೆಳೆಸಿಕೊಳ್ಳುವುದೂ ಸಾಧ್ಯ." ಭಾಷೆಯನ್ನು ಕಲಿಸುವ ಪ್ರಕ್ರಿಯೆಯನ್ನು ಗಣಿತದಷ್ಟು ನಿರ್ದಾಕ್ಷಿಣ್ಯವಾಗಿ ಕುಬ್ಜಗೊಳಿಸಿಲ್ಲದಿದ್ದರೂ ಉತ್ತೇಜನಕಾರಿಯಾಗೇನೂ ಇಲ್ಲ. ಭಾಷೆಯನ್ನು ಕಲಿಸುವ ವಿಷಯದಲ್ಲಿ ನರೇಂದ್ರ ಜೋಷಿ ಮತ್ತು ಸಹಾಬುದ್ದಿನ್ ಅನ್ಸಾರಿ ಅವರು ಕ್ರಿಯಾ ಸಂಶೋಧನೆಯ ಭಾಗವಾಗಿ ತೆಗೆದುಕೊಂಡ ಹೆಜ್ಜೆಗಳು ಖಂಡಿತವಾಗಿಯೂ ಮಕ್ಕಳಿಗೆ ಹಿಂದೀ ಭಾಷಾ ಅಭಿರುಚಿಯನ್ನು ಬೆಳೆಸಿಕೊಳ್ಳುವಲ್ಲಿ ಸಹಕಾರಿಯಾಯಿತು. ಈ ವಿಡಿಯೋಗಳಲ್ಲಿ ಶಿಕ್ಷಕರು ಮಕ್ಕಳ ನಿಜ ಜೀವನದ ಅನುಭವಗಳ ಆಧಾರವನ್ನು ಭಾಷಾ ಕಲಿಕೆಯಲ್ಲಿ ನೀಡುವುದನ್ನು ಗಮನಿಸಿದೆವು. ಮಕ್ಕಳು ಭಾಷೆಯನ್ನು ಅನುಭವಿಸಲು ಅನುಕೂಲವಾಗುವಂತೆ ಪದಗಳನ್ನು ಅವರಿಗೆ ಪರಿಚಯಿಸುಲಾಯಿತು, ಕೇವಲ ಅಕ್ಷರಗಳಲ್ಲ. ಈ ಶಿಕ್ಷಕರು ಎದುರಿಸಿದ ಒಂದು ಸಾಮಾನ್ಯ ಸಮಸ್ಯೆಯೆಂದರೆ ಮನೆಯಲ್ಲಿ ಹಿಂದಿ ಉಪಯೋಗಿಸದ ಮಕ್ಕಳಿಗೆ ಹಿಂದಿ ಹೇಳಿಕೊಡುತ್ತಿದ್ದುದು. ಇದಕ್ಕಾಗಿ ಕಥೆಯ ಮೂಲಕ ಭಾಷೆಯನ್ನು ಕಲಿಸಲು ಆರಂಭಿಸಿದರು. ಚಿಕ್ಕ ಮತ್ತು ಆಸಕ್ತಿದಾಯಕ ಕಥೆಗಳನ್ನು ಕಾಗದಗಳಲ್ಲಿ ಬರೆದು, ಗೋಡೆಗೆ ತೂಗು ಹಾಕುವುದು, ಕೆಲವು ದಿನಗಳ ನಂತರ ಆ ಪಾಠವನ್ನು ಕೈಗೆತ್ತಿಕೊಳ್ಳುವುದು. ಮಕ್ಕಳಿಗೆ ಅಭಿನಯ, ಹಾವ ಭಾವದ ಮೂಲಕ ಜೋರಾಗಿ ಆ ಕಥೆಯನ್ನು

ಓದಿ ಹೇಳುವುದು. ಪ್ರತೀ ಮಗುವಿಗೂ ಕಥೆಯ ಪ್ರತಿಯನ್ನು ನೀಡಿ ಅವರೇ ಓದಿಕೊಳ್ಳುವಂತೆ ಮಾಡುವುದು. ಕಥೆಯ ಒಂದೊಂದು ವಾಕ್ಯವನ್ನೂ ಕಾಗದದ ಬೇರೆ ಬೇರೆ ಚೂರುಗಳಲ್ಲಿ ಬರೆದು, ಜೋಡಿಸುವಂತೆ ಪ್ರೇರೇಪಿಸುವುದು. ಹೀಗೆ! ಪಾತ್ರಾಭಿನಯ, ಆಟಗಳು ಮುಂತಾದ ಕಲಿಕಾ ಚಟುವಟಿಕೆಗಳನ್ನು ಉಪಯೋಗಿಸಿದರು. ಸುಮಾರು 3 ತಿಂಗಳಿನಲ್ಲಿ ಸಾಕಷ್ಟು ಮಕ್ಕಳು ಓದುವ ಕೌಶಲದಲ್ಲಿ ಗಮನಾರ್ಹ ಸುಧಾರಣೆ ಹೊಂದಿದರು.

ಈ ವಿಡಿಯೋ ತುಣುಕು ಅಷ್ಟೇನೂ ಸಂಕಲನ ಪ್ರಕ್ರಿಯೆಗೆ ಒಳಗಾಗಿಲ್ಲ. ಶಿಕ್ಷಕರು ಮಾತನಾಡಿದಾಗ ತಡವರಿಸಿದ್ದು ಮುಂತಾದುವುಗಳನ್ನೇನು ಕತ್ತರಿಸಿಲ್ಲ. ಆ ನೈಜತೆ ಉಳಿದುಕೊಂಡಿರುವ ಇದರಲ್ಲಿ ಶಿಕ್ಷಕರು ಹಾಕಿರುವ ಪರಿಶ್ರಮ ಕಾಣಿಸುತ್ತದೆ. ನಿಯಮಿತವಾಗಿ ಶಾಲೆಗೆ ಬರಲಾರದ ಮಕ್ಕಳು, ಮನೆಯ ಪರಿಸರದಲ್ಲಿ ಯಾವುದೇ ಪೂರಕ ಬೆಂಬಲ ಇಲ್ಲದಿರುವುದು, ತರಗತಿಯ ಕಲಿಕಾ ಮಟ್ಟಕ್ಕೆ ಹೊಂದಿಕೊಳ್ಳುವುದು ಮುಂತಾದ ಅಡೆತಡೆಗಳ ಮಧ್ಯೆಯೇ ಇಷ್ಟೆಲ್ಲಾ ಮಾಡಿದ್ದಾರೆ. ಶಿಕ್ಷಕರು ತಾವು ಭಾಗವಹಿಸಿದ್ದ ವಿವಿಧ ತರಬೇತಿ ಕಾರ್ಯಕ್ರಮಗಳಲ್ಲಿ ಕಲಿತದ್ದನ್ನು ಬಳಸಿಕೊಂಡು ಪರಿಕಲ್ಪನೆ ಮತ್ತು ತಂತ್ರಗಳನ್ನು ಹಣೆದಿದ್ದಾರೆ ಎಂಬುದೂ ಈ ವಿಡಿಯೋಗಳಿಂದ ವಿದಿತವಾಯಿತು. ಇದು ಬಹಳ ಪ್ರೋತ್ಸಾಹದಾಯಕ ವಿಷಯ. ಸಾಕಷ್ಟು ಶಿಕ್ಷಕರು ತರಬೇತಿ ಕಾರ್ಯಕ್ರಮಗಳಿಗೆ ಹೋಗುತ್ತಾರಾದರೂ ಎಷ್ಟು ಜನ ಕಲಿತದ್ದನ್ನು ಉಪಯೋಗಿಸುತ್ತಾರೆ? ಅಷ್ಟೇ ಅಲ್ಲ ಮಕ್ಕಳು ಹಿಂಜರಿಕೆ ಮತ್ತು ನಿಧಾನಗತಿ ಹೊಂದಿರುವಲ್ಲಿ ಕಲಿಸುವ ಹೊಸ ಹೊಸ ತಂತ್ರಗಳನ್ನು ಹೆಣೆಯುತ್ತಿರುವುದು ಕಾಣಸಿಗುತ್ತದೆ. ಈ ವಿಡಿಯೋಗಳು ನೈಜವಾದದ್ದರಿಂದ ಕೇವಲ ಹೊಗಳಿಕೆಯಷ್ಟೇ ಅಲ್ಲದೇ ಶಿಕ್ಷಕರಿಗೆ ಬೇಕಾದ ಸಂಪೂರ್ಣ ಚಿತ್ರಣವನ್ನು ನೀಡುತ್ತದೆ. ಈ ಯೋಜನೆ ಮುಗಿಸಿದ್ದರೂ ಕೆಲಸ ಇನ್ನೂ ಮುಗಿದಿಲ್ಲ ಎಂದು ಶಿಕ್ಷಕರು ಹೇಳಿರುವ ಮಾತು ಇತರ ಶಿಕ್ಷಕರಲ್ಲೂ ಸ್ಪಂದನೆಯನ್ನುಂಟು ಮಾಡುವುದು ಖಚಿತ. ಸರೀಕರ ಸಹಕಾರ ಮತ್ತು ಹೊಸ ಚಿಂತನೆಗಳ ಅಗತ್ಯವನ್ನೂ ಈ ಪ್ರಕ್ರಿಯೆ ಪೂರೈಸಬಲ್ಲುದು.

ಎಫ್) ಭಾಷೆ ಕಲಿಸುವ ಎರಡು ವಿಧಾನಗಳ ಸಮ್ಮಿಶ್ರಣ : ಮದನ್ ಮೋಹನ್ ಜೋಷಿ

ಮದನ್ ಮೋಹನ್ ಅವರು ಪರಿಸರ ವಿಜ್ಞಾನವನ್ನು ಕಲಿಸುತ್ತಿದ್ದರು. ಅವರು ನಾಲ್ಕನೇ ತರಗತಿಯವರಿಗೆ ಹಿಂದೀಯನ್ನು ಕಲಿಸಲು ಉದ್ಯುಕ್ತರಾದದ್ದು ಮೆಚ್ಚುವ ವಿಷಯ. ಅವರ ತರಗತಿಯ ಕೆಲವು (5) ವಿದ್ಯಾರ್ಥಿಗಳು ಓದಲು, ಬರೆಯಲು ಮತ್ತು ಪದಗಳನ್ನು ಗುರುತಸಿಲಾಗದ್ದರಿಂದ, ಹಿಂದಿಯ ಕವಿತೆಯನ್ನೋ ಅಥವಾ ಕಥೆಯನ್ನೋ ಆನಂದಿಸಲು ಆಗುತ್ತಿರಲಿಲ್ಲ.
ಹಾಗಾಗಿ ಅವರು ಆ ಮಕ್ಕಳಿಗೆ ಸಾಮಾನ್ಯವಾಗಿ ಕಲಿಸುತ್ತಿದ್ದ ರೀತಿ ಮತ್ತು ಭಾಷೆ ಎರಡನ್ನೂ ಸಮ್ಮಿಶ್ರಗೊಳಿಸಿ ಹೊಸದೇ ರೀತಿಯನ್ನು ಕಂಡುಕೊಂಡರು. ಒಂದು ಕಥೆಯನ್ನು ಓದಿ ಹೇಳಿ, ಅದರಲ್ಲಿರುವ ಪದಗಳನ್ನು ಗುರುತಿಸುವಂತೆ ಮಾಡಿ ನಂತರದಲ್ಲಿ ಅಕ್ಷರಗಳನ್ನು ಪರಿಚಯಿಸಿದರು. ಮಕ್ಕಳು ಓದಬಲ್ಲರೇ ಎಂಬುದನ್ನೂ ನೋಡಲು ಕಥೆಯನ್ನು ಕೊನೆಯಿಂದ ಓದುವಂತೆ ಮಾಡಿದರು. ಆದರೂ ಇವರು ತಾವು ಉಪಯೋಗಿಸಿದ ಇತರ ತಂತ್ರಗಳು ಮತ್ತು ಉದಾಹರಣೆಗಳನ್ನು ನೀಡಬೇಕಿತ್ತು. ಈ ವಿಡಿಯೋದಲ್ಲಿ ಅವು ಕಾಣುತ್ತಿಲ್ಲ. ಕೆಲವೇ ತಿಂಗಳುಗಳಲ್ಲಿ ಈ ಮಕ್ಕಳು ಎಲ್ಲ ಪದಗಳನ್ನು ಓದಲು ಕಲಿತರು ಎಂಬ ಹೇಳಿಕೆನ್ನು ನಂಬುವುದೂ ಕಷ್ಟವೇ. ಮಕ್ಕಳು ಓದಲು ಕಲಿತದ್ದರಿಂದ ಕಥೆ ಕವನಗಳನ್ನು ಅನುಭವಿಸಲು ಕಲಿತರು ಎಂದೂ ಹೇಳುತ್ತಾರೆ. ಮದನರು ಈ ಐದು ಮಕ್ಕಳು ಪ್ರತ್ಯೇಕ ಗುಂಪಿನಲ್ಲಿ ಕೆಲಸ ಮಾಡುವಂತೆ ಮಾಡಿದರು. ಆದರೆ ಈ ಎರಡು ಗುಂಪುಗಳನ್ನೂ ತರಗತಿಯಲ್ಲಿ ಒಟ್ಟಾಗಿ ನಿರ್ವಹಿಸಲು ಹೆಣಗುತ್ತಿದ್ದರು. ಈ ಶಿಕ್ಷಕರ ಬಗ್ಗೆ ಹೆಚ್ಚಿನ ವಿಷಯ ಮತ್ತು ಅವರು ಪರಿಸರ ವಿಜ್ಞಾನದಿಂದ ಹಿಂದೀಗೆ ಬದಲಾಯಿಸಿದಾಗ ಅವರ ಅನುಭವ ಇವುಗಳೂ ಇದ್ದಿದ್ದರೆ ಈ ವಿಡಿಯೋ ಇನ್ನೂ ಚೆನ್ನಾಗಿ ಇರುತ್ತಿತ್ತು. ಈ ವಿಡಿಯೋವನ್ನು ಇನ್ನೂ ಚೆನ್ನಾಗಿ ಸಂಕಲಿಸಬಹುದಿತ್ತು. ಆದರೆ ಶಿಕ್ಷಕರು ದಾಖಲು ಮಾಡಲು ಪಟ್ಟ ಪರಿಶ್ರಮ ವಿದಿತವಾಗುತ್ತಿದೆ.

**ಕ್ರಿಯಾ ಸಂಶೋಧನೆ ಮತ್ತು ಚಿಂತನಶೀಲ ಆಚರಣೆ**
ಕಲಿಸುವುದು ಒಂದು ಚಿಂತನಶೀಲ ಆಚರಣೆ. ಶಿಕ್ಷಕರು ನಿರಂತರವಾಗಿ ತನ್ನ ಯೋಜನೆ, ತಂತ್ರಗಳನ್ನು ಗಮನಿಸುತ್ತಾ ಹೊಸತನ್ನು ಹುಡುಕುತ್ತಾ ಉತ್ತಮ ಪಡಿಸಲು ತಮ್ಮ ಪಾಠದ ರೀತಿಗಳಲ್ಲಿ ಬದಲಾವಣೆಯನ್ನು ಮಾಡಿಕೊಳ್ಳುತ್ತಾ ಇರಬೇಕು. ಉತ್ತಮಗೊಳಿಸಲು ಅನುಭವದ ಸುತ್ತ ಚಿಂತನೆ ನಡೆಸುತ್ತಾ ಪಾಠ ಮಾಡುವ ಹೊಸ ಹೊಸ ಯೋಜನೆಗಳನ್ನು ರೂಪಿಸಿಕೊಳ್ಳುವುದನ್ನು 'ಚಿಂತನಶೀಲ ಶಿಕ್ಷಕ ಮಾದರಿ' ಎಂದು ಗುರುತಿಸಲಾಗಿದೆ (ಮ್ಯಾಕ್‌ಮಹೋನ್, 1999). ಈ ಸಂಶೋಧನಾ ಯೋಜನೆಯಲ್ಲಿ ಭಾಗವಹಿಸಿದ ಶಿಕ್ಷಕರೂ ಈ ಮಾತನ್ನು ಒಪ್ಪುತ್ತಾರೆ. ಅವರ ಕೆಲಸದ ರೀತಿಯೇ ಚಿಂತನೆ ಮತ್ತು ಚಟುವಟಿಕೆಯನ್ನು ಆಧರಿಸಿದೆ.

ಈ ವಿಡಿಯೋಗಳನ್ನು ನೋಡುತ್ತಿದ್ದರೆ ಕ್ರಿಯಾ ಸಂಶೋಧನೆಯ ಪ್ರಕ್ರಿಯೆಯು ಶಿಕ್ಷಕರಿಗೆ ತಮ್ಮ ತರಗತಿಗಳ ಬಗ್ಗೆ ಯೋಚಿಸಲು ಬಹಳಷ್ಟು ಸಹಾಯ ನೀಡಿದೆ ಎಂದು ತಿಳಿಯುತ್ತದೆ. ಅಲ್ಲಿನ ಕಲಿಸುವ ಕಲಿಯುವ ಪ್ರಕ್ರಿಯೆ, ಮಕ್ಕಳು ಕಲಿಯುವ ಬಗೆ, ಮಕ್ಕಳೂ ಸುಲಭವಾಗಿ ಕಲಿಯಲು ಅನುಕೂಲವಾಗುವಂತಹ ತಂತ್ರಗಳು, ಕಲಿಯುವವರು ಎದುರಿಸುವ ತೊಂದರೆಗಳು, ಹೀಗೆ ಮತ್ತಷ್ಟು. ಈ ಶಿಕ್ಷಕರು ಮಕ್ಕಳು ಕಲಿಕೆಯಲ್ಲಿ ತೊಡಗಿಕೊಳ್ಳಲು ಸಹಾಯ ಮಾಡಿದ್ದಾರೆ. ಮಕ್ಕಳು ಕಲಿಯುವುದರಲ್ಲಿನ ಬದಲಾವಣೆಗಳನ್ನು ಗಮನಿಸಿದರೆ ಅವರ ಮುಖಗಳಲ್ಲಿ ನಗು ಅರಳಿದೆ ಮತ್ತು ಏನನ್ನೋ ಚೆನ್ನಾಗಿ ಮಾಡುತ್ತಿರುವ ಆನಂದವಿದೆ. ಇತರ ಶಿಕ್ಷಕರು, ಶಾಲೆಯ ಮುಖ್ಯಸ್ಥರು ಮುಂತಾದವರೊಡನೆ ಒಟ್ಟಾಗಿ ಕೆಲಸ ಮಾಡಲು ಮತ್ತು ತಮ್ಮ ಸಮಸ್ಯೆ ಹಾಗೂ ತಂತ್ರಗಳನ್ನು ಚರ್ಚಿಸಲು ಅನುವು ಮಾಡಿದೆ. ದಾಖಲೀಕರಣ ಕ್ಲಿಷ್ಟವೆನಿಸದರೂ ಚಿಂತಿಸಲು ಮತ್ತು ಸವೆಸಿದ ದಾರಿಯನ್ನು ಅರಿಯಲು ಸಹಾಯ ಮಾಡಿದೆ.

ಶಿಕ್ಷಕರು ಮತ್ತು ಶಿಕ್ಷಕ ತರಬೇತುದಾರರಿಗೆ ಈ ವಿಡಿಯೋಗಳು ಮತ್ತು ವಿವರಣೆಗಳು ಭಾರತದ ಸಂದರ್ಭದ ಒಂದು ಒಳ್ಳೆಯ ಸಂಪನ್ಮೂಲವಾಗಿಯೂ ಉಪಯುಕ್ತವಾಗಿವೆ. ಕ್ರಿಯಾ ಸಂಶೋಧನೆಯನ್ನು ಅರಿತುಕೊಳ್ಳಲು ಕಾರ್ಯಾಗಾರಗಳಲ್ಲಿ ಉಪಯೋಗಿಸಬಹುದಾದ ಇವು ಸ್ವ-ಕಲಿಕೆಯ ಸಾಧನವಾಗಿಯೂ ಬಳಸಬಹುದಾಗಿದೆ. ಇದರಲ್ಲಿನ ಉದಾಹರಣೆಗಳು ಇಂತಹ ತಂತ್ರಗಳನ್ನು ಉಪಯೋಗಿಸಲು ಇತರ ಶಿಕ್ಷಕರನ್ನೂ ಪ್ರೇರೇಪಿಸಬಹುದು.

ವಿಡಿಯೋಗಳ ಪ್ರತಿಗಳನ್ನು ಪಡೆಯಲು ಸಂಪರ್ಕಿಸಿ: *Shinto Mathew - shinto.mathew@azimpremjifoundation.org*

***ಉಲ್ಲೇಖ***

Tim McMahon (1999), Is reflective practice synonymous with
action research? Educational Action Research, 7:1, 163-169, DOI: 10.1080/09650799900200080

ಸ್ನೇಹಾ ಅವರು ಅಜೀಂ ಪ್ರೇಮ್‌ಜೀ ವಿಶ್ವವಿದ್ಯಾನಿಲಯದ ಮುಂದುವರೆದ ಶಿಕ್ಷಣ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿದ್ದಾರೆ. ಗಣಿತದ ಸೌಂದರ್ಯ, ತಾರ್ಕಿಕತೆ ಮತ್ತು ಪ್ರಸ್ತುತತೆಯನ್ನು ಹಂಚುವುದೇ ಅವರ ತುಡಿತ. ಅಟ್ ರೈಟ್ ಆಂಗಲ್ಸ್ ಎಂಬ ಪ್ರೌಢಶಾಲಾ ಗಣಿತ ಸಂಪನ್ಮೂಲದ ಸಹ ಸಂಪಾದಕರೂ ಆಗಿದ್ದಾರೆ. ಗ್ರಾಮೀಣ ಮತ್ತು ನಗರ ಪ್ರದೇಶದ ಗಣಿತ ಶಿಕ್ಷಕರಿಗೆ ಮಾರ್ಗದರ್ಶನ ನೀಡುವ ಕೆಲಸದಲ್ಲೂ ತೊಡಗಿಕೊಂಡಿದ್ದಾರೆ. ಸಮಸ್ಯಾ ಪರಿಹಾರದ ಮೂಲಕ ಕೌಶಲ ಅಭಿವೃದ್ಧಿಯ ಮತ್ತು ಗಣಿತ ಕಲಿಸುವ ಶಿಕ್ಷಣ ಶಾಸ್ತ್ರದ ಬಗ್ಗೆಯೂ ಕಾರ್ಯಾಗಾರಗಳನ್ನೂ ನಡೆಸುತ್ತಾರೆ. ಇವರನ್ನು sneha.titus@ azimpremjifoundation.org ಮೂಲಕ ಸಂಪರ್ಕಿಸಬಹುದು.

ಇಂದುಮತಿಯವರು ಅಜೀಂ ಪ್ರೇಮ್‌ಜೀ ವಿಶ್ವವಿದ್ಯಾನಿಲಯದ ಮುಂದುವರೆದ ಶಿಕ್ಷಣ ವಿಭಾಗದಲ್ಲಿದ್ದಾರೆ. ವಿಜ್ಞಾನ ಶಿಕ್ಷಣ, ಮಹಿಳೆ ಮತ್ತು ವಿಜ್ಞಾನ ಮತ್ತು ಶಿಕ್ಷಕರ ವೃತ್ತಿಪರ ಬೆಳವಣಿಗೆ ಇವು ಅವರ ಆಪ್ತ ವಿಷಯಗಳು. ಶಿಕ್ಷಣದ ಬಗ್ಗೆ ಸಂಶೋಧನೆ ನಡೆಸುತ್ತಿರುವ ಅವರು ವಿಜ್ಞಾನ ತರಗತಿಗಳಲ್ಲಿ ಹೆಣ್ಣುಮಕ್ಕಳ ಅನುಭವದ ಬಗ್ಗೆ ಪ್ರೌಢ ಪ್ರಬಂಧ ಬರೆಯುತ್ತಿದ್ದಾರೆ. ಇವರನ್ನು s.indumathi@azimpremjifoundation.org ಮೂಲಕ ಸಂಪರ್ಕಿಸಬಹುದು .